ಪತ್ರಿಕಾ ತುಣುಕುಗಳು
**PAPER CLIPPINGS**

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE 24/1/2020

# ಇಂದು ಸಿಎಂ ವಾಪಸ್: ಸಂಪುಟ ಕುತೂಹಲ

ಕ.ಪ್ರ. 24-1-20

## ಸಂಪುಟ ವಿಸ್ತರಣೆಗೆ ದಿಲ್ಲಿ ಎಲೆಕ್ಷನ್ ಅಡ್ಡಿ ಆಗುತ್ತಾ? ದಿಲ್ಲಿಗೆ ತೆರಳಿ ನಡ್ಡಾ ಜತೆ ಸಿಎಂ ಚರ್ಚೆ ಬಳಿಕ ಚಿತ್ರಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿದೇಶ ಪ್ರವಾಸದಿಂದ ಶುಕ್ರವಾರಮಧ್ಯಾಹ್ನ ಬೆಂಗಳೂರಿಗೆ ವಾಪಸಾಗುತ್ತಿದ್ದು, ಸಚಿವ ಸಂಪುಟ ವಿಸ್ತರಣೆಗೆ ಸಂಬಂಧಿಸಿದ ಚಟುವಟಿಕೆಗಳು ಗರಿಗೆದರಲಿವೆ.



ಯಡಿಯೂರಪ್ಪ ಅವರು ವಿದೇಶದಿಂದ ಆಗಮಿಸುವುದನ್ನೇ ಕಾತರದಿಂದ ಕಾಯುತ್ತಿರುವ ಅರ್ಹ ಶಾಸಕರು ಶುಕ್ರವಾರ ಸಂಜೆ ಅಥವಾ ಶನಿವಾರ ಭೇಟಿ ಮಾಡಿ ಸಂಪುಟ ವಿಸ್ತರಣೆ ಕುರಿತು ಮುಂದಿನ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸುವುದರ ಜೊತೆಗೆ ಒತ್ತಡವನ್ನೂ ಹೇರುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಗೆದ್ದಿರುವ ಅರ್ಹ ಶಾಸಕರ ಪೈಕಿ ಎಷ್ಟು ಮಂದಿಗೆ ಸಚಿವ ಸ್ಥಾನ ನೀಡಬೇಕು? ಉಪಚುನಾವಣೆಯಲ್ಲಿ ಸೋತವರ ಮುಂದಿನ ರಾಜಕೀಯ ಭವಿಷ್ಯ ಏನು? ಚುನಾವಣೆಗೆ ಸ್ಪರ್ಧಿಸದೆ ಕಣದಿಂದ ಹಿಂದೆ ಸರಿದವರಿಗೆ ಸ್ಥಾನಮಾನ ನೀಡುವುದು ಹೇಗೆ? ಪಕ್ಷದ ಇತರ ಪ್ರಮುಖ ಆಕಾಂಕ್ಷಿಗಳಿಗೆ ಸಚಿವ ಸ್ಥಾನದ ಅವಕಾಶ ಹೇಗೆ ಕಲ್ಪಿಸುವುದು? ➘ 7

# ಸಿಎಂ ವಾಪಸ್: ಸಂಪುಟ ಕುತೂಹಲ

➘ ಮೊದಲ ಪುಟದಿಂದ ಕ.ಪ್ರ. 24-1-20

ಇದಕ್ಕಾಗಿ ಯಾರನ್ನಾದರೂ ಹಾಲಿ ಸಚಿವರನ್ನು ಕೈಬಿಡಬೇಕೆ ಎಂಬಿತ್ಯಾದಿ ಅಂಶಗಳ ಬಗ್ಗೆ ಯಡಿಯೂರಪ್ಪ ಮತ್ತು ವರಿಷ್ಠರ ನಡುವೆ ಮತ್ತೊಂದು ಸುತ್ತಿನ ವಿಸ್ತೃತ ಸಮಾಲೋಚನೆ ನಡೆದ ಬಳಿಕವೇ ಸಂಪುಟ ವಿಸ್ತರಣೆ ಬಗ್ಗೆ ಸ್ಪಷ್ಟ ಚಿತ್ರಣ ಹೊರಬೀಳಲಿದೆ ಎನ್ನಲಾಗಿದೆ.

**2 ದಿನದಲ್ಲಿ ವಿಸ್ತರಣೆ ಅನುಮಾನ:** ವಿದೇಶ ಪ್ರವಾಸದಿಂದ ವಾಪಸಾದ ಎರಡು ದಿನಗಳಲ್ಲೇ ಸಂಪುಟ ವಿಸ್ತರಣೆ ಕೈಗೊಳ್ಳಲಾಗುವುದು ಎಂಬ ಮಾತನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕಳೆದ ಭಾನುವಾರ ಪ್ರಯಾಣ ಆರಂಭಿಸುವ ಮೊದಲು ಹೇಳಿದ್ದರು. ಆದರೆ, ಅವರು ಹೇಳಿದಂತೆ ಎರಡು ದಿನಗಳಲ್ಲೇ ಸಂಪುಟ ವಿಸ್ತರಣೆ ಕೈಗೊಳ್ಳುವ ಸಾಧ್ಯತೆ ಕಡಿಮೆಯಿದೆ. ರಾಷ್ಟ್ರೀಯ ಬಿಜೆಪಿಯ ನೂತನ ಅಧ್ಯಕ್ಷರಾಗಿ ಜೆ.ಪಿ.ನಡ್ಡಾ ಅವರು ನೇಮಕಗೊಂಡಿರುವುದರಿಂದ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಯದ ಹೊರತು ಸಂಪುಟ ವಿಸ್ತರಣೆ ಬಗ್ಗೆ ತೀರ್ಮಾನ ಹೊರಬೀಳುವ ನಿರೀಕ್ಷೆ ಇಲ್ಲ ಎಂದು ಮೂಲಗಳು ತಿಳಿಸಿವೆ. ಈ ನಡುವೆ ದೆಹಲಿ ವಿಧಾನಸಭಾ ಚುನಾವಣೆ ಫೆ.8ರಂದು ನಡೆಯಲಿದೆ. ದೇಶದ ಶಕ್ತಿ ಕೇಂದ್ರವಾಗಿರುವ ದೆಹಲಿ ವಿಧಾನಸಭೆಯನ್ನು ಆಮ್ ಆದ್ಮಿ ಪಕ್ಷದಿಂದ ವಶಪಡಿಕೊಳ್ಳುವ ತಂತ್ರಗಾರಿಕೆಯಲ್ಲಿ ಬಿಜೆಪಿ ರಾಷ್ಟ್ರೀಯ ನಾಯಕರು ನಿರತರಾಗಿದ್ದಾರೆ. ಹೀಗಾಗಿ, ಆ ಚುನಾವಣೆ ಮುಗಿಯುವ ಮೊದಲೇ ಕರ್ನಾಟಕದ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಿ ಅನುಮತಿ ನೀಡುತ್ತಾರಾ ಎಂಬುದೂ ಇನ್ನೂ ಸ್ಪಷ್ಟವಾಗಿಲ್ಲ.

ಬರುವ ಫೆ.17ರಿಂದ ರಾಜ್ಯದ ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ಆರಂಭವಾಗಲಿದೆ. ಸಚಿವರಾದರೆ ಮಾತ್ರ ಅಧಿವೇಶನಕ್ಕೆ ಕಾಲಿಡಲಾಗುವುದು ಎಂಬ ಸಂಕಲ್ಪವನ್ನು ಅರ್ಹ ಶಾಸಕರು ತೊಟ್ಟಿರುವುದರಿಂದ ಅಷ್ಟರವರೆಗೆ ಸಂಪುಟ ವಿಸ್ತರಣೆಗಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಬಳಿ ಸಮಯವಿದೆ.

ಯಡಿಯೂರಪ್ಪ ಅವರು ವಿದೇಶದಲ್ಲಿದ್ದಾಗ ನಡ್ಡಾ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಹೀಗಾಗಿ, ನಡ್ಡಾ ಅವರನ್ನು ಯಡಿಯೂರಪ್ಪ ಭೇಟಿ ಮಾಡಿದ ವೇಳೆ ಹಿಂದಿನ ಅಧ್ಯಕ್ಷರೂ ಆಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರನ್ನು ಭೇಟಿ ಮಾಡಿ ಸಂಪುಟ ವಿಸ್ತರಣೆಗೆ ಹಸಿರು ನಿಶಾನೆ ಪಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.